# ಯಕ್ಷಗಾನ ಮತ್ತು ಕನ್ನಡ ರಂಗಭೂಮಿಯ ಸಂಬಂಧ

**ರಾಘವೇಂದ್ರ ತುಂಗ ಕೆ.***

DOI: https://doi.org/10.5281/zenodo.22107506

**ABSTRACT**

ಯಕ್ಷಗಾನ ಎಂಬ ಹೆಸರು ಆಂಧ್ರ ಮತ್ತು ಕರ್ನಾಟಕ ರಾಜ್ಯಗಳ ಅನೇಕ ದೇಶೀಯ ಸಾಂಪ್ರದಾಯಿಕ ರಂಗಕಲೆಗಳನ್ನು ಸೂಚಿಸುವ ಪದವಾದರೂ ನಮ್ಮ ನಾಡಿನಲ್ಲಿ, ಈಚಿನ ದಶಕಗಳಲ್ಲಿ ಯಕ್ಷಗಾನ ಎಂದರೆ ಕರಾವಳಿ ಹಾಗೂ ಮಲೆನಾಡಿನ ಪ್ರಾಂತದಲ್ಲಿ ಬೇರೂರಿ ಜನಜೀವನದಲ್ಲಿ ಹಾಸು – ಹೊಕ್ಕಾದ 'ಪಡುವಲಪಾಯ' ಎಂದು ಹೆಸರಾದ ರಂಗಕಲೆಯ ಪ್ರಭೇದವೆಂದೇ ಭಾವಿಸಲಾಗಿದೆ. ಇನ್ನು 'ಮೂಡಲಪಾಯ' ಎಂದು ಕರೆಸಿಕೊಳ್ಳುವ ಪ್ರಭೇದದಲ್ಲಿಯೂ ಬೇರೆ ಬೇರೆ ರಂಗಪ್ರಯೋಗಗಳನ್ನು ಕಾಣಲು ಸಾಧ್ಯ.'ಪಡುವಲಪಾಯ' ಯಕ್ಷಗಾನ ವಲಯದಲ್ಲಿ ಅದರ ಶಾಸ್ತ್ರೀಯತೆಯ ಬಗೆಗೆ ಜಾನಪದೀಯತೆಯ ಬಗೆಗೆ ಸಾಕಷ್ಟು ಚರ್ಚೆಗಳೂ ಆಗಿವೆ. ಇದು ಸರ್ವಾಂಗ ಸಂಪನ್ನ ಶಾಸ್ತ್ರೀಯ ನಾಟ್ಯ –ನೃತ್ಯ ವಿಧಾನಗಳೆರಡರ ಪ್ರತಿನಿಧಿಯಾಗಿ ನಿಲ್ಲಲು ಬೇಕಾದ ಆಂತರಿಕ ಸಂಪನ್ಮೂಲವನ್ನು ಹೊಂದಿದ್ದು ಎಲ್ಲಾ ಸಮಸ್ಯೆಗಳ ನಡುವೆಯೂ ಸಾಕಷ್ಟು ಸತ್ವಪೂರ್ಣವಾಗಿದೆ. ನಾಡಿನ ಪ್ರಾತಿನಿಧಿಕ ಕಲೆಯಾಗಿ ನಿಲ್ಲಬಲ್ಲ ಶಕ್ತಿ ಇದಕ್ಕಿದೆ. ಪ್ರಯೋಗ ಮತ್ತು ನಾವೀನ್ಯತೆಗಳು ಎಂಥದ್ದೇ ಕಲೆಯ ಉಳಿವು ಬೆಳವುಗಳಿಗೆ ಅನಿವಾರ್ಯ "ಯಾವುದೇ ಕಲೆಯಲ್ಲಿ ಕಾಲೋಚಿತವಾಗಿ ಬದಲಾವಣೆಗಳನ್ನಾಗಲಿ, ಸುಧಾರಣೆಗಳನ್ನಾಗಲಿ, ನವೀನ ಪ್ರಯೋಗಗಳನ್ನಾಗಲಿ ತರುವುದರ ಬಗೆಗಿನ ಯುಕ್ತಾಯುಕ್ತತೆಗಳು ಆಯಾ ಕಲೆಗಳ ಪ್ರಬುದ್ಧತೆಯನ್ನು ಅವಲಂಬಿಸಿರುತ್ತವೆ. ಅಲ್ಲದೆ ಎಲ್ಲಾ ಪ್ರಬುದ್ಧ ಕಲೆಗಳಲ್ಲಿಯೂ – ಅಷ್ಟೇಕೆ, ಯಾವುದೇ ಒಂದು ದಿಟವಾದ ಕಲಾಪ್ರಕಾರದಲ್ಲೂ ಕೂಡ – ರೂಪ ಸ್ವರೂಪಗಳ (ಆಕೃತಿ – ಆಶಯಗಳ) ಏಕಭಾವ ಅಥವಾ ಐಕಾತ್ಮ್ಯವು ತುಂಬ ಉನ್ನತ ಮಟ್ಟದಲ್ಲಿರುವ ಕಾರಣ ಯಾವುದೇ ಬಗೆಯ ದುಡುಕುತನದ 'ಸುಧಾರಣಾವಾದ' ಅಥವಾ 'ಪ್ರಯೋಗಶೀಲವಾದ' ವಾಗಲಿ ಆಯಾ ಕಲಾಹೃದಯಗಳಿಗೆ ಘಾತಕವನ್ನುಂಟುಮಾಡದಿರದು" ಎಂಬ ಸೇಡಿಯಾಪು ಕೃಷ್ಣಭಟ್ಟರ ಮಾತು ಮುಖ್ಯವಾಗಿದೆ. ಯಾವುದೇ ಪ್ರಬುದ್ಧ ಕಲೆಯಲ್ಲಿ ಸುಧಾರಣೆ, ನಾವೀನ್ಯ, ಪ್ರಯೋಗಾದಿಗಳನ್ನು ಕೈಗೊಳ್ಳಬೇಕೆಂದರೆ ಸಹೃದಯರೂ, ಕಲಾವಿದರೂ ಆಯಾ ಕಲೆಯ ಆಧ್ಯಾತ್ಮ ನಿಷ್ಠೆಯನ್ನು ಗಮನಿಸಿಕೊಳ್ಳಲೇಬೇಕು. ಜೀವ–ಜಗತ್ತುಗಳ ಆಧ್ಯಾತ್ಮ ನಿಷ್ಠೆಯು ಬ್ರಹ್ಮದಲ್ಲಾದರೆ ಕಲೆಯ ಆಧ್ಯಾತ್ಮ ನಿಷ್ಠೆಯು ರಸದಲ್ಲಿದೆ. ಆದುದರಿಂದ ರಸನಿಷ್ಠೆಯಲ್ಲದ

* **ರಾಘವೇಂದ್ರ ತುಂಗ ಕೆ.,** ಸಹಾಯಕ ಪ್ರಾಧ್ಯಾಪಕರು, ಎಂ.ಜಿ.ಎಂ. ಕಾಲೇಜು, ಉಡುಪಿ.

ಎಂಥ ಮುನ್ನಡೆಯೂ – ಅದನ್ನ ಯಾರೇ ಮಾಡಲಿ, ಹೇಗೋ ಮಾಡಲಿ ಅದು – ವ್ಯರ್ಥವ್ಯವಸ್ಥೆ ಆಗದೆ, ಆಯಾ ಕಲೆ ನಾಶಕ್ಕೂ ಕಾರಣವಾಗುವುದರಲ್ಲಿ ಸಂದೇಹವಿಲ್ಲ. ರಸವೆಂಬುದು ಬೋಧ–ಮೋದ ಅಖಂಡಾನುಭವ. ಏಕಕಾಲದಲ್ಲಿ ಭಾವ–ಬುದ್ಧಿಗಳ ಸಂಸ್ಕಾರ ಹಾಗೂ ಸತ್ತ್ವೋದ್ರೇಕಗಳಿಗೆ ಇಲ್ಲಿ ಪರಮಾವಕಾಶವಿದೆ. ಎನ್ನುವ ಆರ್. ಗಣೇಶ್ ಅವರ ಮಾತುಗಳು ಕೂಡ ಕಲೆ ಪರಿಷ್ಕರಣೆಗೆ ಒಳಗಾಗುವ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಇದು ಒಟ್ಟು ಕಲೆಯ ಪರಿಣಾಮಗಳನ್ನು ಶೋಧಿಸುವಂತಿದೆ. ಅಂತೆಯೇ ರಂಗಭೂಮಿ ಕೇವಲ ಮನರಂಜನೆಯ ಮಾಧ್ಯಮವಲ್ಲ ಅದು ಸಮಾಜದ ಸಮಸ್ಯೆಗಳನ್ನು ಪ್ರತಿಬಿಂಬಿಸುವ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಶಕ್ತಿಯುತ ಮಾಧ್ಯಮವಾಗಿದೆ. ನಾಟಕ, ಬೀದಿ ನಾಟಕ, ಯಕ್ಷಗಾನ ಮುಂತಾದ ರಂಗರೂಪಗಳ ಮೂಲಕ ಸಾಮಾಜಿಕ ನ್ಯೂನತೆ ಅಸಮಾನತೆಗಳ ವಿರುದ್ಧ ಜನರಲ್ಲಿ ಅರಿವು ಮೂಡಿಸಲಾಗಿದೆ.

**KEYWORDS:** ರಂಗಭೂಮಿ, ಯಕ್ಷಗಾನ, ಪ್ರಬುದ್ಧ ಕಲೆ, ನಾವೀನ್ಯ, ವ್ಯಕ್ತಿತ್ವ ವಿಕಾಸ.

ಯಕ್ಷಗಾನವು ಕರ್ನಾಟಕದ ಕರಾವಳಿ ಭಾಗದಲ್ಲಿ ಹುಟ್ಟಿ ಬೆಳೆದು ಬಂದ ಒಂದು ಪ್ರಸಿದ್ಧ ಸಾಂಪ್ರದಾಯಿಕ ರಂಗಕಲೆ. ಇದು ನೃತ್ಯ, ಸಂಗೀತ, ಮಾತುಗಾರಿಕೆ ಮತ್ತು ವಿಶಿಷ್ಟ ವೇಷಭೂಷಣಗಳ ಸಂಗಮವಾಗಿದೆ. ಸುಮಾರು 10ನೇ ಶತಮಾನದಿಂದಲೂ ಇದರ ಬೇರುಗಳು ಕನ್ನಡ ಸಾಹಿತ್ಯ ಮತ್ತು ದೇಸಿ ಸಂಪ್ರದಾಯಗಳಲ್ಲಿ ಇದ್ದು, ಭಕ್ತಿ ಪಂಥದ ಕಾಲದಲ್ಲಿ ಇದು ವಿಶೇಷವಾಗಿ ವಿಕಾಸಗೊಂಡಿತು ಎಂದು ಹೇಳಲಾಗಿದೆ. ಭಾರತೀಯ ರಂಗಭೂಮಿಯ ಅತ್ಯಂತ ಪ್ರಾಚೀನವಾದ ಕಲಾಪ್ರಕಾರಗಳಲ್ಲಿ ಒಂದಾಗಿದೆ. ಇದು ನಾಟಕ, ಸಂಗೀತ, ನೃತ್ಯ, ಅಭಿನಯ ಮತ್ತು ಸಾಹಿತ್ಯಗಳನ್ನು ಒಳಗೊಂಡ ಸಮಗ್ರ ಕಲೆಯಾಗಿದೆ. ಭಾರತೀಯ ರಂಗಭೂಮಿಯ ಮೂಲವನ್ನು ವೇದ ಕಾಲದ ಆಚರಣೆಗಳು, ಧಾರ್ಮಿಕ ವಿಧಿಗಳು ಮತ್ತು ಜನಪದ ಪ್ರದರ್ಶನಗಳಲ್ಲಿ ಕಾಣಬಹುದು. ಭರತಮುನಿಯ 'ನಾಟ್ಯಶಾಸ್ತ್ರ' ಭಾರತೀಯ ರಂಗಭೂಮಿಯ ಪ್ರಮುಖ ಪ್ರಾಚೀನ ಗ್ರಂಥವಾಗಿದೆ. ಇದರಲ್ಲಿ ನಾಟಕದ ರಚನೆ, ಅಭಿನಯ, ರಸ ಭಾವ, ರಂಗಮಂದಿರ, ವೇಷಭೂಷಣ ಮತ್ತು ಸಂಗೀತದ ಕುರಿತು ವಿವರಿಸಲಾಗಿದೆ. ಸಂಸ್ಕೃತ ನಾಟಕ ಪರಂಪರೆಯಲ್ಲಿ ಕಾಳಿದಾಸ, ಭಾಸ, ಶೂದ್ರಕ, ಮತ್ತು ಭವಭೂತಿ ಪ್ರಮುಖ ನಾಟಕಕಾರರಾಗಿದ್ದರು. ಕಾಳಿದಾಸನ ಅಭಿಜ್ಞಾನ ಶಾಕುಂತಲ ಭಾರತೀಯ ರಂಗಭೂಮಿ ಕೃತಿಗಳಲ್ಲಿ ಒಂದಾಗಿದೆ.

ಕನ್ನಡ ರಂಗಭೂಮಿ ವಿಕಾಸದಲ್ಲಿ ಮೂರು ವಿಭಿನ್ನ ವಾಹಿನಿಗಳನ್ನು ನಾವು ಗಮನಿಸಬಹುದು. ಮೊದಲನೆಯದು ಜಾನಪದ ವಾಹಿನಿ, ಎರಡನೆಯದು ವೃತ್ತಿನಾಟಕ ವಾಹಿನಿ, ಮೂರನೆಯದು ವಿಲಾಸಿ ರಂಗಭೂಮಿ. ಕನ್ನಡ ರಂಗಭೂಮಿಯ ಜಾನಪದ ವಾಹಿನಿಯಲ್ಲಿ ಅತ್ಯಂತ ಪ್ರಾಚೀನವಾದುದು, ದಕ್ಷಿಣಕನ್ನಡ ಜಿಲ್ಲೆಯ ಭೂತಾರಾಧನೆ. ಅಲ್ಲಿ ಅಸಂಖ್ಯಾತ ಭೂತಗಳನ್ನು ಚೌಡಿ, ದೆವ್ವಗಳನ್ನು ಆರಾಧಿಸುವುದು ಬಹು ಹಿಂದಿನಿಂದಲೂ ಬೆಳೆದು ಬಂದ ಪದ್ಧತಿ. ನೈಸರ್ಗಿಕ ಶಕ್ತಿಗಳನ್ನು ಕಂಡು ಭಯಕ್ಕೆ ಒಳಗಾದಾಗ ಆದಿವಾಸಿಗಳು ಕಲ್ಪಿಸಿಕೊಂಡ ರೂಪಗಳಲ್ಲಿ ಒಂದು ದೇವರಾದರೆ ಮತ್ತೊಂದು ಭೂತ. ಎರಡರ ಆರಾಧನೆಯ ಉದ್ದೇಶವೂ ಒಂದೇ. ಪ್ರಕೃತಿಯ ಉಗ್ರಶಕ್ತಿಗಳಿಂದ ರಕ್ಷಣೆಯನ್ನು ಪಡೆಯುವುದು. ಹೀಗೆ

ಅಸಂಖ್ಯಾತ ಭೂತಗಳನ್ನೂ ಆರಾಧಿಸಲಾಯಿತು. ಹೀಗೆ ನಾಗಾರಾಧನೆ, ಉತ್ತರ ಕರ್ನಾಟಕ ಭಾಗದಲ್ಲಿ ಶಕ್ತಿ ಪೂಜೆಯ ಅಂಗವಾಗಿ ಬೆಳೆದು ಬಂದ ಎಲ್ಲಮ್ಮನ ಕುಣಿತ ಒಂದು ಆರಾಧನ ಪದ್ಧತಿಯಾಗಿ ನಾವು ಕಾಣುತ್ತೇವೆ. ವೀರಗಾಸೆ ಕುಣಿತ, ಪುರವಂತರು, ಕೋಲಾಟ, ಕೋಲೆ ಬಸವನ ಆಟ, ಹಗಲು ವೇಷ, ಬಹುರೂಪಿ ಮೊದಲಾದ ರೂಪಗಳು ನಾಟಕದ ಕೆಲವು ಅಂಶಗಳನ್ನು ಮೈಗೂಡಿಸಿಕೊಂಡಿದ್ದವು. ಹಾಗೆಯೇ ಹರಿಕಥೆ, ಶಿವಕಥೆ, ಕಂಸಾಳೆಗಳು, ವೇಷ ಭೂಷಣ, ಸಂಭಾಷಣ ತಂತ್ರ, ಹಾಡು ಅಭಿನಯ ಇವೆಲ್ಲವನ್ನು ಒಳಗೊಂಡು ನಾಟಕೀಯವಾಗಿರುತ್ತದೆ. ಈ ಜಾನಪದ ರೂಪಗಳು ನಮ್ಮ ಕನ್ನಡಿಗರ ದಿನನಿತ್ಯದ ಬದುಕಿನಲ್ಲಿ ಹಾಸುಹೊಕ್ಕಾಗಿದ್ದುದರಿಂದ ನಮ್ಮ ಜನರಿಗೆ ರಂಗಭೂಮಿಯ ಪರಿಚಯ ಬಹು ಹಿಂದಿನಿಂದಲೂ ಇತ್ತೆಂದು ಊಹಿಸಬಹುದು. ಯಕ್ಷಗಾನ ಬಯಲಾಟಗಳು ನಮ್ಮ ಪಾಲಿಗೆ ತೀರಾ ಮೊದಲಿನ ನಾಟಕಗಳೆಂದೇ ಹೇಳಬಹುದು. ಧಾರ್ಮಿಕ ಆಚರಣೆಗಳ ಅಂಗವಾಗಿ ಹುಟ್ಟುವಾಗ ಸಂಪ್ರದಾಯದಿಂದಲೇ ಬೆಳೆದ ಬಯಲಾಟಗಳ ಪ್ರಾಚೀನತೆಯನ್ನು ದಾಖಲೆಗಳ ಕಾರಣ ಗುರುತಿಸಲು ಸಾಧ್ಯವಾಗಿಲ್ಲ. ಕನ್ನಡ ನಾಡು ಮೂರು ನಾಲ್ಕು ಪ್ರದೇಶಿಕ ಭಿನ್ನತೆಯನ್ನು ಮೈಗೂಡಿಸಿಕೊಂಡಿದೆ. ಇದರಿಂದಾಗಿ ಯಕ್ಷಗಾನ, ದೊಡ್ಡಾಟ, ಸಣ್ಣಾಟ, ಮುಂತಾಗಿ ವಿಭಿನ್ನ ನಾಟಕ ರೂಪಗಳು ಕಂಡುಬರುತ್ತವೆ. ಒಂದೇ ಸಾಂಸ್ಕೃತಿಕ ಮೂಲದಿಂದ ಹುಟ್ಟಿಬಂದರೂ ಕಾಲಾನುಕ್ರಮದಲ್ಲಿ ಭಿನ್ನ ಭಿನ್ನ ಪ್ರಭಾವಗಳಿಂದ ಇವುಗಳ ರೂಪಗಳೂ ಭಿನ್ನವಾಗಿವೆ. ಜನಪದ ರಂಗಭೂಮಿಯಲ್ಲಿ ಯಕ್ಷಗಾನ, ತಾಳಮದ್ದಳೆ, ಗೊಂಬೆಯಾಟ, ತೊಗಲುಗೊಂಬೆಯಾಟ, ಮೂಡಲಪಾಯ ಅಥವಾ ದೊಡ್ಡಾಟ, ಸಣ್ಣಾಟ, ದಾಸರಾಟ, ಶ್ರೀಕೃಷ್ಣ ಪಾರಿಜಾತ, ಡಪ್ಪಿನಾಟ, ಸಣ್ಣಾಟ, ಸಂಗ್ಯಾಬಾಳ್ಯಾ ಮೊದಲಾದ ಎಲ್ಲಾ ಆಟಗಳನ್ನೂ ಧಾರ್ಮಿಕ ಆಚರಣೆ, ಉತ್ಸವ, ಜಾತ್ರೆ, ಸಂತೋಷ ಕೂಟಗಳಂತಹ ಸಂದರ್ಭಗಳಲ್ಲಿ ಆಡುತ್ತಿದ್ದರು. ಬಯಲಾಟಗಳು ಸುಗ್ಗಿಯ ಕಾಲದಲ್ಲಿ, ಬೇಸಿಗೆಯ ದಿನಗಳಲ್ಲಿ ಉಚಿತವಾಗಿ ಪ್ರದರ್ಶಿಸಲ್ಪಡುತ್ತಿದ್ದವು. ಈ ತಂಡಗಳಲ್ಲಿ ಅಭಿನಯಿಸುವ ನಟರು ಜೀವನ ನಿರ್ವಹಣೆಗೆ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿದ್ದರು. ನಾಟಕ ಅವರಿಗೆ ವೃತ್ತಿಯಾಗಿರಲಿಲ್ಲ. ಕನ್ನಡ ನಾಡಿನ ಪ್ರಾಚೀನ ರಂಗಭೂಮಿಯ ಬಗ್ಗೆ ಅನೇಕ ಉಲ್ಲೇಖಗಳು ಸುಮಾರು ಒಂಬತ್ತನೆಯ ಶತಮಾನದಿಂದಲೂ ಕನ್ನಡ ಕಾವ್ಯಗಳಲ್ಲಿ ಮತ್ತು ಶಾಸನಗಳಲ್ಲಿ ಕಂಡುಬರುತ್ತದೆ. ಹಳಗನ್ನಡ ಸಾಹಿತ್ಯದಲ್ಲೂ 'ಪಗರಣ' ಎಂಬ ಒಂದು ಸಾಹಿತ್ಯ ರೂಪದ ಉಲ್ಲೇಖವಿದೆ. ಸಂಸ್ಕೃತ ನಾಟಕಗಳಲ್ಲಿ ಒಂದಾದ 'ಪ್ರಕರಣದ' ತದ್ಭವ ರೂಪವೇ ಪಗರಣ. ಅತ್ಯಂತ ಪ್ರಾಚೀನ ಜನಪದ ನಾಟಕ ಪ್ರಕಾರವೆಂದರೆ ಬಯಲಾಟಗಳು. ಯಕ್ಷಗಾನ ಗೀತ ಸಂಪ್ರದಾಯ ಅದಕ್ಕಿಂತಲೂ ಹಳೆಯದು. 16 ನೆಯ ಶತಮಾನದ ರತ್ನಾಕರ ವರ್ಣಿಯ ಕೃತಿ 'ಭರತೇಶ ವೈಭವ'ದ ಪೂರ್ವ ನಾಟಕ ಸಂಧಿ ಮತ್ತು ಉತ್ತರ ನಾಟಕ ಸಂಧಿಗಳಲ್ಲಿ ಬರುವ ಪದ್ಯಗಳಿಗೂ ಯಕ್ಷಗಾನ ಬಯಲಾಟಕ್ಕೂ ಸಾಮ್ಯವಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಶಿವರಾಮ ಕಾರಂತರಿಗೆ ದೊರೆತಿರುವ ಅತ್ಯಂತ ಪ್ರಾಚೀನ ಬಯಲಾಟದ ಕೃತಿಯ ಕಾಲ ಕ್ರಿ.ಶ. 1564 ಅದರ ಕರ್ತೃ ಅಜಪುರ ವಿಷ್ಣು ವಾರಂಬಳ್ಳಿ ಎಂಬಾತ. 17 ನೆಯ ಶತಮಾನದ ಅನೇಕ ಯಕ್ಷಗಾನ ಪ್ರಸಂಗಗಳ ಪ್ರತಿಗಳನ್ನು ಕಾರಂತರು ಸಂಗ್ರಹಿಸಿದ್ದಾರೆ. ಇದರಿಂದಾಗಿ ಅದಕ್ಕೂ ಮುಂಚೆ ಅಂದರೆ 15 ನೆಯ ಶತಮಾನದಲ್ಲಿ ಯಕ್ಷಗಾನ ಬಯಲಾಟಗಳು ಇದ್ದವೆಂದು ತಿಳಿಯಬಹುದು. ಹಾಗಾಗಿ ಜನ ಸಾಮಾನ್ಯರ ನಡುವೆ ಹರಿದು ಬಂದ ಜನಪದ ರಂಗವಾಹಿನಿ ಅದಕ್ಕಿಂತಲೂ ಹಳೆಯದು ಎಂದು ಧಾರಾಳವಾಗಿ ಹೇಳಬಹುದು.

ಭಟ್ಟಾಕಳಂಕನ 'ಶಬ್ದಾನುಶಾಸನ' (ಕ್ರಿ.ಶ 1604) ದಲ್ಲಿ ನಾಟಕದ ಬಗ್ಗೆ ಉಲ್ಲೇಖವಿದೆ.

ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ' ಎಂಬ ಕೃತಿಯಲ್ಲಿ (ಕ್ರಿ.ಶ 1648) ನಾಟ್ಯಶಾಲೆಯೂ, ಲಿಂಗಣ್ಣ 'ಕೆಳದಿ ನೃಪ ವಿಜಯ'ದಲ್ಲಿ (ಕ್ರಿ.ಶ. 1750) ವೆಂಕಪ್ಪ ನಾಯಕನೆಂಬುವನು ನಾಟಕ ಶಾಲೆಯನ್ನು ನಿರ್ಮಾಣ ಮಾಡಿಸಿದನೆಂಬ ಸಂಗತಿಯು ಉಲ್ಲೇಖಿಸಲ್ಪಟ್ಟಿದೆ. ಇದುವರೆಗೆ ಗಮನಿಸಲಾದ ಕಾವ್ಯ, ಶಾಸ್ತ್ರಗ್ರಂಥ, ಶಾಸನಗಳ ಆಧಾರದಿಂದ ಕ್ರಿ.ಶ. 9 ನೆಯ ಶತಮಾನಕ್ಕೂ ಮುಂಚಿನಿಂದಲೇ ನಮ್ಮಲ್ಲಿ ಮೌಖಿಕ ಸಂಪ್ರದಾಯದ ನಾಟಕಗಳಿದ್ದಿರಬೇಕೆಂದು ಭಾವಿಸಬಹುದು.

ಕನ್ನಡದಲ್ಲಿ ಕರ್ಣಪಾರ್ಯನದ್ದೆಂದು ಹೇಳಲಾಗುವ 'ಮಾಳವಿ ಮಾಧವ' ಕೇಶಿರಾಜನ 'ಸುಭದ್ರಾ ಹರಣ' 'ಪ್ರಬೋಧ ಚಂದ್ರೋದಯ' ಮೊದಲಾದವು ನಾಟಕಗಳಾಗಿರಬೇಕು ಎಂಬುದು ವಿದ್ವಾಂಸರ ಅಭಿಪ್ರಾಯ. ಆದರೆ ಈ ಕೃತಿಗಳು ಇನ್ನೂ ಉಪಲಬ್ಧವಾಗಿಲ್ಲ. ಇಂಗ್ಲಿಷ್ ನಾಟಕಗಳ ಪ್ರಭಾವದಿಂದ ಮುಂಬೈಯಲ್ಲಿ 'ಬಾಲಿವಾಲಾ' ಎಂಬ ಪಾರ್ಸಿ ನಾಟಕ ಕಂಪೆನಿಯೊಂದು ಹುಟ್ಟಿಕೊಂಡಿತು. ಈ ನಾಟಕ ಕಂಪೆನಿ 1880ರ ಸುಮಾರಿಗೆ ಮೈಸೂರು ಬೆಂಗಳೂರುಗಳಿಗೆ ಬಂದು ಹಲವು ನಾಟಕಗಳನ್ನು ಅಭಿನಯಿಸಿತು. ಇದರ ಜೊತೆಗೆ ಸಾಂಗ್ಲಿ, ಜಮಖಂಡಿ, ಹಾಗೂ ಮರಾಠಿ ನಾಟಕ ಕಂಪೆನಿಗಳ ನಾಟಕಗಳೂ ಕರ್ನಾಟಕದ ಜನರನ್ನು ರಂಜಿಸಿದವು. ಇದರಿಂದ ಪ್ರೇರಿತರಾಗಿ ಆಗಿನ ಮೈಸೂರು ಮಹಾರಾಜರಾಗಿದ್ದ ಚಾಮರಾಜ ಒಡೆಯರು 1882 ರಲ್ಲಿ ಮೈಸೂರಿನಲ್ಲಿ 'ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ'ವನ್ನು ಸ್ಥಾಪಿಸಿದರು. ನಾಟಕ ರಂಗಕ್ಕೆ ಬೇಕಾಗುವ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿದರು. 'ಚಾಮರಾಜೇಂದ್ರ ನಾಟಕ ಸಭಾ'ವನ್ನು ಅನುಸರಿಸಿ 'ಶಾಕುಂತಲ ಕರ್ನಾಟಕ ನಾಟಕ ಸಭಾ', 'ರತ್ನಾವಳಿ ನಾಟಕ ಸಭಾ', 'ಚನ್ನಬಸವೇಶ್ವರ ಕೃಪಾಷೋಷಿತ ನಾಟಕ ಮಂಡಳಿ', 'ಶ್ರೀ ಕಂಠೇಶ್ವರ ನಾಟಕ ಸಭಾ' ಮೊದಲಾದ ನಾಟಕ ಕಂಪೆನಿಗಳು ಹುಟ್ಟಿಕೊಂಡವು. ಈ ಕಂಪೆನಿಗಳಿಗೆ ನಾಟಕಗಳನ್ನು ಬರೆಯಲು ಹಲವಾರು ನಾಟಕಕಾರರು ಕಟ್ಟಿಕೊಂಡರು.

ಕನ್ನಡದಲ್ಲಿ ವೃತ್ತಿ ನಾಟಕಗಳ ಪರಂಪರೆ ಪಾರ್ಸಿ ಕಂಪೆನಿ ನಾಟಕಗಳ ಅನುವಾದದಿಂದ ಪ್ರಾರಂಭವಾಯಿತು. ಅವಲ್ಲದಿದ್ದರೆ ಜನಪದ ಪರಂಪರೆಯ ರಾಮಾಯಣ, ಮಹಾಭಾರತ ಪುರಾಣಗಳ ಕಥಾವಸ್ತುವನ್ನೊಳಗೊಂಡು, ನೃತ್ಯ, ಸಂಗೀತಗಳೇ ಹೆಚ್ಚಾಗಿದ್ದ ನಾಟಕಗಳನ್ನು ಆಡುತ್ತಿದ್ದರು. ಇದೇ ಕಾಲದಲ್ಲಿ ಅನೇಕ ಸಂಸ್ಕೃತ ನಾಟಕಗಳು ಕನ್ನಡಕ್ಕೆ ಅನುವಾದವಾಗಿ ಪ್ರದರ್ಶಿಸಲ್ಪಟ್ಟವು. ಕನ್ನಡ ನಾಟಕದ ಉಗಮ ಈ ಅನುವಾದಗಳಿಂದಲೇ ಆಯಿತು. ಕಾಳಿದಾಸನ 'ಅಭಿಜ್ಞಾನ ಶಾಕುಂತಲಾ', ಭವಭೂತಿಯ 'ಉತ್ತರ ರಾಮ ಚರಿತ್ರೆ', 'ಶ್ರೀಹರ್ಷನ ರತ್ನಾವಳಿ', ಭಟ್ಟ ನಾರಾಯಣನ 'ವೇಣಿಸಂಹಾರ' ಈ ನಾಟಕಗಳು ತರ್ಜುಮೆಯಾಗಿ ರಂಗವನ್ನೇರಿದವು.

ಮೈಸೂರಿನ ಮಹಾರಾಜರ ಆಶ್ರಯದಲ್ಲಿ 1881 ರಲ್ಲಿ 'ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ಜನ್ಮತಾಳಿತು. ಇದೇ ಸಮಯದಲ್ಲಿ ಮಂಡ್ಯಂ ರಂಗಾಚಾರ್ಯರ 'ರಾಜಧಾನಿ ನಾಟಕ ಮಂಡಳಿ' ಹುಟ್ಟಿಕೊಂಡಿತು. 1902 ರಲ್ಲಿ ವರದಾಚಾರ್ಯರು 'ರತ್ನಾವಳಿ ನಾಟಕ ಸಭಾ' ಪ್ರಾರಂಭಿಸಿದರು. 'ವರನಟ' ಮತ್ತು 'ನಾಟಕ ಶಿರೋಮಣಿ' ಎಂಬ ಬಿರುದುಗಳನ್ನು ಪಡೆದಿದ್ದ ವರದಾಚಾರ್ಯರ 'ಗುಲೇಬಕಾವಲಿ' ನಾಟಕದಲ್ಲಿ ಬೆಕ್ಕು, ಇಲಿ, ಮುಂಗುಸಿಗಳೂ ಪಾತ್ರವಹಿಸುತ್ತಿದ್ದವು.

ಗುಬ್ಬಿ ಚಂದಣ್ಣನವರು 'ಗುಬ್ಬಿ ಚೆನ್ನಬಸವೇಶ್ವರ ಕೃಪಾಷೋಷಿತ ನಾಟಕ ಸಂಘ'

ವನ್ನು 1920 ರಲ್ಲಿ ವೀರಣ್ಣನವರು ಗುಬ್ಬಿ ಕಂಪೆನಿಯ ಮಾಲೀಕತ್ವವನ್ನು ವಹಿಸಿಕೊಂಡರು. 1935 ರಲ್ಲಿ ಗುಬ್ಬಿ ವೀರಣ್ಣನವರ 'ಕುರುಕ್ಷೇತ್ರ' ಎಂಬ ನಾಟಕಕ್ಕೆಂದೇ ಮಹಾರಾಜರು 'ತಾರಾ' ಎಂಬ ಆನೆಮರಿಯನ್ನು ಬಹುಮಾನವಾಗಿ ನೀಡಿದರು. 1920 ರಲ್ಲಿ ರಂಗನಾಥ ಭಟ್ಟರ 'ಅಂಬಾ ಪ್ರಸಾದಿತ ನಾಟಕ ಮಂಡಳಿ' ಜನ್ಮತಾಳಿ ಇಡೀ ಕನ್ನಡ ನಾಡನ್ನೆಲ್ಲಾ ಸುತ್ತಾಡಿ ಅಸಂಖ್ಯಾತ ಪ್ರದರ್ಶನಗಳನ್ನು ಕಂಡಿತು. ಹೀಗೆ ಹಲವಾರು ವೃತ್ತಿನಾಟಕ ಕಂಪೆನಿಗಳು ಕಾರ್ಯ ನಿರ್ವಹಿಸಿದವು. ಹೀಗೆ ಬೆಳೆದು ಬಂದ ಕನ್ನಡ ನಾಟಕ ಪರಂಪರೆಗೆ ವಿಲಾಸಿ ನಾಟಕಗಳು ಸೇರ್ಪಡೆಯಾದವು. ಹೊಸ ಮಾದರಿಯ ನಾಟಕ ಪ್ರದರ್ಶನಗಳಿಗೆ, ಪಾಶ್ಚಾತ್ಯರ ಆಧುನಿಕ ರಂಗ ತಂತ್ರಗಳನ್ನು ಅಳವಡಿಸಿಕೊಂಡು ಇನ್ನಷ್ಟು ಪ್ರಗತಿಯನ್ನು ಕಂಡಿತು. ತಾಂತ್ರಿಕ ರಂಗಾಭಿವ್ಯಕ್ತಿಯ ವಿಚಾರ ಅಥವಾ ಭಾವನೆಗಳ ಮೂಲಕ ಪ್ರಕಟಗೊಳ್ಳಬೇಕು. ಅದೇ ರೀತಿಯಲ್ಲಿ ಪ್ರಮುಖವಾದ ರಂಗಭೂಮಿಗೆ ಹೊರತಾದ ಉದ್ದೇಶಗಳ ಸಾಧನೆಗೆ ಬಳಕೆಯಾದರೆ ಯಾವ ಪ್ರಯೋಜನವೂ ಇರುವುದಿಲ್ಲ.

ಒಂದು ಶತಮಾನಕ್ಕೂ ಹೆಚ್ಚು ಕಾಲದ ಹಿನ್ನೆಲೆಯಿರುವ ಕನ್ನಡ ರಂಗಭೂಮಿಯ ಚಟುವಟಿಕೆಗೆ ಇನ್ನಷ್ಟು ವೇಗ ಸಿಗಬೇಕಾದ ಅಗತ್ಯವಿದೆ. ಕನ್ನಡದಲ್ಲಿ ರಚನೆಯಾದ ನಾಟಕಗಳನ್ನು ಅವುಗಳ ಸ್ವರೂಪದ ಮೇಲೆ ಅನುವಾದಿತ ನಾಟಕಗಳು ಮತ್ತು ಸ್ವತಂತ್ರ ನಾಟಕಗಳು ಎಂದು ಗುರುತಿಸಲಾಗಿದೆ. ಸಂಸ್ಕೃತ, ಇಂಗ್ಲಿಷ್ ಮುಂತಾದ ಭಾಷೆಗಳಿಂದ ಅನುವಾದಗೊಂಡು ರಂಗದ ಮೇಲೆ ಪ್ರದರ್ಶನಗೊಂಡವು. ಸ್ವತಂತ್ರ ನಾಟಕಗಳಲ್ಲಿ ಪೌರಾಣಿಕ ನಾಟಕಗಳು, ಐತಿಹಾಸಿಕ ನಾಟಕಗಳು, ಸಾಮಾಜಿಕ ನಾಟಕಗಳು ಹೆಚ್ಚು ಹೆಚ್ಚು ರಚನೆಗೊಂಡವು. ಜೊತೆಯಲ್ಲಿ ಗೀತನಾಟಕಗಳು ಸಾಕಷ್ಟು ಮನ್ನಣೆಯನ್ನು ಪಡೆದವು.

ಪ್ರದರ್ಶನ ಕಲೆಗಳಲ್ಲಿ ಅತ್ಯಂತ ಸಿರಿವಂತ ಕಲೆ ಎನಿಸಿಕೊಂಡ ಯಕ್ಷಗಾನ ಗೀತ, ವಾದ್ಯ, ಕುಣಿತ, ವೇಷಭೂಷಣ, ಮಾತುಗಾರಿಕೆಗಳೆಂಬ ಪಂಚಾಂಗದ ಮೇಲೆ ಕಲಾಸೌಧ ಭದ್ರವಾಗಿ ನಿಂತಿದೆ ಎಂದು ಕಡತೋಕ ಮಂಜುನಾಥ ಭಾಗವತರು ನುಡಿಯುತ್ತಾರೆ. ಯಕ್ಷಗಾನ ಕಲಾವಿದ ಪಿ. ವಿ. ಹಾಸ್ಯಗಾರ ಅವರು 'ಯಕ್ಷಗಾನ ಬರಿಯ ಗಾನವಲ್ಲ, ನಾಟ್ಯ, ಗೀತ, ಗಾನ, ವಾದ್ಯ, ಬಣ್ಣ, ಬೇಗಡೆಗಳಿಂದ, ಸಂಪೂರ್ಣವೂ ಸಮೃದ್ಧವೂ ಆದ ಸಮಷ್ಟಿ ಕಲೆ, ಸಾಹಿತ್ಯ-ಸಂಗೀತಗಳಿಂದ ಕಿವಿಗೆ ಇಂಪನ್ನು ಚಿತ್ರವಿಚಿತ್ರ ಮುಖವರ್ಣಿಕೆ ಮತ್ತು ಸುಂದರ ಕಲಾಪೂರ್ಣ ವೇಷಭೂಷಣಗಳಿಂದ ಹಾಗೂ ಕ್ರಮಬದ್ಧ ವಾದನ ನಾಟ್ಯಗಳಿಂದ ಕಣ್ಣಿಗೆ ಸೊಂಪನ್ನು, ಧರ್ಮ ಬೋಧನೆಯಿಂದ ಮನಸ್ಸಿಗೆ ತಂಪನ್ನು ಕೊಡುವ ವಿಶಿಷ್ಟ ಕಲೆಯಾಗಿದೆ' ಎಂದು ಹೇಳುತ್ತಾರೆ.

ಯಕ್ಷಗಾನದ ವೇಷಭೂಷಣ, ಬಣ್ಣಗಾರಿಕೆಗಳನ್ನು ನಮ್ಮ ಜನಪದರು ತಮ್ಮ ಅಪೂರ್ವ ಕಲ್ಪನೆಯಿಂದ ಸೃಷ್ಟಿಸಿದರು. ಅತಿಮಾನವ, ದೇವದಾನವ, ಕಿರಾತರು ಇವರನ್ನು ಚಿತ್ರಿಸುವ ರೀತಿ ಅನುಪಮವಾದುದು. ಕೇವಲ ಬಣ್ಣಗಾರಿಕೆಯ ಚಾತುರ್ಯದಿಂದ ದೇವತೆಗಳನ್ನು, ರಾಕ್ಷಸರನ್ನು, ಗಂಧರ್ವರನ್ನು ಗುರುತಿಸುವಷ್ಟು ಪರಿಣತಿಯನ್ನು ಕಲಾವಿದರು ಸಾಧಿಸಿದ್ದಾರೆ. ಬಣ್ಣಗಳಿಂದ ಪಾತ್ರಗಳ ಗುಣ ಸ್ವಭಾವಕ್ಕೆ ಸಂಕೇತವಾಗುವಂತಹ ಮುಖವರ್ಣಿಕೆ ಹಾಗೂ ಸಾಂಪ್ರದಾಯಿಕ ವೇಷಭೂಷಣಗಳಿಂದ ಯಕ್ಷಗಾನ ಮೇಳೈಸಿದೆ. ವಿವಿಧ ಪಾತ್ರಗಳು ಸೇರಿದಾಗಲೂ, ಒಂಟಿಯಾಗಿದ್ದಾಗಲೂ ಅವುಗಳ ಅಂಗರೇಖೆ, ಅಲಂಕರಣ, ಅವುಗಳಲ್ಲಿ ಕಾಣಿಸುವ ಬಣ್ಣಗಳು, ಬಣ್ಣದಿಂದ ಹೊಮ್ಮುವ ಛಾಯೆ ತೀರ ಪರಸ್ಪರ ಹೊಂದಿಕೊಂಡಿರುವಂತಿರುತ್ತದೆ. ರಂಗಭೂಮಿಯಲ್ಲಿ ನಾಟಕದ ಕಥೆಗಳಿಗನುಸಾರವಾಗಿ ಮೇಕಪ್ ಹಾಗೂ ಪೋಷಾಕುಗಳಿರುತ್ತವೆ. ಇನ್ನು ಐತಿಹಾಸಿಕ, ಪೌರಾಣಿಕ, ಸಾಮಾಜಿಕ

ಕಥೆಗಳ ಆಧಾರದಲ್ಲಿ ವ್ಯತ್ಯಾಸಗೊಳ್ಳುತ್ತವೆ.

**ಅಧ್ಯಯನದ ಉದ್ದೇಶಗಳು:**

- ಯಕ್ಷಗಾನ ಮತ್ತು ಕನ್ನಡ ರಂಗಭೂಮಿಯ ಅಂತರ್ ಸಂಬಂಧವನ್ನು ಗುರುತಿಸುವುದು.
- ರಂಗಭೂಮಿ ಹಾಗೂ ಯಕ್ಷಗಾನದ ಮೂಲಕ ಶೈಕ್ಷಣಿಕ ಮೌಲ್ಯಗಳನ್ನು ಹೆಚ್ಚಿಸುವ ಬಗೆಗಳನ್ನು ನೋಡುವುದು.
- ಕಲಾ ಪ್ರಕಾರಗಳ ಮಹತ್ವವನ್ನು ಅರಿಯುವುದು.
- ಭಾಷಾ ಮತ್ತು ಸಂವಹನ ಕೌಶಲಗಳನ್ನು ಪರಿಣಾಮಕಾರಿಯಾಗಿ ವೃದ್ಧಿಸುವಂತೆ ಮಾಡುವುದು. ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಹೇಗೆ ಕಾರಣವಾಗುತ್ತದೆ ಎಂದು ಗುರುತಿಸುವುದು ಮುಖ್ಯ ಉದ್ದೇಶಗಳಾಗಿವೆ.

**ಯಕ್ಷಗಾನ ಮತ್ತು ರಂಗಭೂಮಿಯ ಶೈಕ್ಷಣಿಕ ಮೌಲ್ಯ:**

ಯಕ್ಷಗಾನ ಬೆಳೆದು ಬಂದಿರುವುದು ಗ್ರಾಮೀಣ ಪ್ರದೇಶದಲ್ಲಿ. ಇದು ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಿಗೆ ಮೀಸಲಾಗಿದ್ದರೂ ಒಂದು ಕಲಾಪ್ರಕಾರವಾಗಿ ನಾಡಿನಾದ್ಯಂತ ಪಸರಿಸಿತು. ಪ್ರಾಚೀನ ಕನ್ನಡ ಕಾವ್ಯಗಳಲ್ಲೂ ಯಕ್ಷಗಾನವನ್ನು ಉಲ್ಲೇಖಿಸಿದ ಉದಾಹರಣೆಗಳಿವೆ. ಗ್ರಾಮೀಣ ಜನರ ಜೀವನ ಧಾರ್ಮಿಕ ತಳಹದಿಯ ಮೇಲೆ ನಿಂತಿತ್ತು. ದೈನಂದಿನ ಚಟುವಟಿಕೆಗಳನ್ನು ಧರ್ಮವೇ ನಿಯಂತ್ರಿಸುತ್ತಿತ್ತು. ಧರ್ಮ ಸಂಸ್ಕೃತಿಗಳ ರಕ್ಷಣೆಗಾಗಿ ಜನ ದೇವಾಲಯಗಳನ್ನು ನಿರ್ಮಿಸಿದರು. ಅಲ್ಲಿ ಬರುವ ಜನಸಾಮಾನ್ಯರಿಗೆ ತಿಳುವಳಿಕೆಯನ್ನು ನೀಡುವ ಕಲೆಯಾಗಿಯೂ ಆರಾಧನ ಕಲೆಯಾಗಿಯೂ ರೂಪುಗೊಂಡಿತು. ಈ ಯಕ್ಷಗಾನದಲ್ಲಿ ಪಾತ್ರ ನಿರ್ವಹಿಸುವ ಕಲಾವಿದರಿಗೆ ಪ್ರಸಂಗದ ಎಲ್ಲಾ ಪಾತ್ರಗಳ ಅರಿವು ಇರಬೇಕಾಗಿತ್ತು. ಸುಶಿಕ್ಷಿತರಲ್ಲದವರೂ ಬಲ್ಲವರಿಂದ ಪುರಾಣ ಪ್ರಸಂಗಗಳನ್ನು ಓದಿಸಿ ತಮ್ಮ ಪಾತ್ರಗಳ ಬಗ್ಗೆ ತಿಳಿದುಕೊಳ್ಳುತ್ತಿದ್ದರು. ಇದರಿಂದ ಓದದೆಯೂ ಅವರು ಪುರಾಣ ಜ್ಞಾನವನ್ನು ಪಡೆಯುತ್ತಿದ್ದರು. ರಾಮಾಯಣ, ಮಹಾಭಾರತ ಭಾಗವತಗಳಿಂದ ಆಯ್ದ ಕಥೆಗಳು, ಮೂಡಲಪಾಯದಲ್ಲಿ ಕರಿಭಂಟನ ಕಾಳಗದಂತಹ ಪ್ರಸಂಗಗಳನ್ನು ಹೆಚ್ಚು ಆಡುತ್ತಿದ್ದರು. ಧಾರ್ಮಿಕ ಕಥೆಗಳು ಜನರ ಮೇಲೆ ದಟ್ಟ ಪರಿಣಾಮವನ್ನು ಉಂಟುಮಾಡುತ್ತಿದ್ದವು. ಇವುಗಳಲ್ಲಿ ಕಾಳಗ ಪ್ರಸಂಗಗಳು, ಕಲ್ಯಾಣ ಪ್ರಸಂಗಗಳು, ಸಂಧಾನ ಪ್ರಸಂಗಗಳು ಇವೆ. ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರಗಳಿಂದ ಪುರಾಣದ ವ್ಯಕ್ತಿಗಳಿಗೆ ಒದಗಿದ ಒಳಿತು–ಕೆಡುಕುಗಳು ಪ್ರದರ್ಶಿಸಿ ಜನರು ತಮ್ಮ ಜೀವನದಲ್ಲಿ ಅನುಸರಿಸಬೇಕಾದ ಸಂಗತಿಗಳನ್ನು ಸಂದೇಶಗಳ ಮೂಲಕ ತಿಳಿಸಲಾಗುತ್ತಿತ್ತು. ಪುರಾಣ ಓದುವುದಕ್ಕಿಂತ ರಂಗದ ಮೇಲೆ ನೋಡುವುದು ಹೆಚ್ಚು ಪರಿಣಾಮವನ್ನು ಉಂಟುಮಾಡುತ್ತದೆ. ಪ್ರಸಂಗ ಕರ್ತರು ದೈವ ಮಹಿಮೆಗಳನ್ನು, ರಾಜನೀತಿ, ಸಮಾಜ ನೀತಿ, ಧರ್ಮ ತತ್ವಗಳನ್ನು ಒಳಗೊಂಡು ಪ್ರಸಂಗ ರಚಿಸುತ್ತಿದ್ದರು. ಗಾದೆಗಳನ್ನು, ದಿನಬಳಕೆಯ ಮಾತುಗಳನ್ನು, ಲೋಕೋಕ್ತಿಗಳನ್ನು ಬಳಸಿಕೊಂಡಿರುವುದಕ್ಕೂ ಉದಾಹರಣೆಗಳಿವೆ. ಕವಿಗಳ ಲೋಕಾನುಭವ, ಜೀವನಾನುಭವ ಪ್ರಸಂಗಗಳಲ್ಲಿ ಅಡಕವಾಗಿರುತ್ತಿತ್ತು. ಸಂಸ್ಕೃತದ ನೀತಿ ವಾಕ್ಯಗಳನ್ನು, ನೀತಿ ಶತಕಗಳ ವಿವರಗಳು ಅದರಲ್ಲಿ ಸೇರಿರುತ್ತಿತ್ತು. ಹಾಗಾಗಿ ಯಕ್ಷಗಾನ ಸಾಹಿತ್ಯ, ಧರ್ಮ, ಸಂಸ್ಕೃತಿಗಳನ್ನು ಜನರಿಗೆ ಬೋಧಿಸುವ ಪಾಠಶಾಲೆಯಾಗಿತ್ತು. ಜನಸಾಮಾನ್ಯರನ್ನು ಯಕ್ಷಗಾನ ವಿದ್ವಾಂಸರನ್ನಾಗಿ ಜ್ಞಾನವಂತರನ್ನಾಗಿ ಮಾಡಿತು. ಅದು ವರ್ಗ ಭೇದ ಎಣಿಸದೆ ಎಷ್ಟು ರಾಜಕೀಯ ಬದಲಾವಣೆಗಳಾದರೂ ಇಂದಿಗೂ ನಮ್ಮ ಗ್ರಾಮೀಣ ಜನಜೀವನದ ಜನಶಿಕ್ಷಣದ ಒಂದು

ಅಂಗವಾಗಿ ಗುರುತಿಸಲ್ಪಟ್ಟಿದೆ. ನಾಟಕವೂ ಕೂಡ ಇದಕ್ಕೆ ಹೊರತಲ್ಲ. ರಂಜನೆಯೊಂದಿಗೆ ಜನರನ್ನು ಸುಶಿಕ್ಷಿತರನ್ನಾಗಿಸುವ ಕೆಲಸ ಮಾಡಿದೆ ಎಂದರೆ ಅತಿಶಯೋಕ್ತಿಯಲ್ಲ.

**ಉಪಸಂಹಾರ:**

ಕನ್ನಡ ರಂಗಭೂಮಿ ಧಾರ್ಮಿಕ ಆಚರಣೆಗಳಿಂದ ಆರಂಭವಾಗಿ, ಸಂಸ್ಕೃತ ನಾಟಕ, ಜನಪದ ರಂಗಭೂಮಿ, ಪಾಶ್ಚಾತ್ಯ ಪ್ರಭಾವದ ಸಾಮಾಜಿಕ-ರಾಜಕೀಯ ನಾಟಕ ಮತ್ತು ಆಧುನಿಕ ಪ್ರಯೋಗಶೀಲ ಹೊಸ ರಂಗಭೂಮಿಯವರೆಗೆ ದೀರ್ಘವಾಗಿ ಬೆಳವಣಿಗೆಯನ್ನು ಹೊಂದಿದೆ. ಇಂದು ಕನ್ನಡ ರಂಗಭೂಮಿ ತನ್ನ ಸಾಂಪ್ರದಾಯಿಕ ವೈಶಿಷ್ಟ್ಯಗಳನ್ನು ಉಳಿಸಿಕೊಂಡು, ಆಧುನಿಕ ತಂತ್ರಜ್ಞಾನ ಮತ್ತು ಹೊಸ ವಿಚಾರಗಳೊಂದಿಗೆ ನಿರಂತರವಾಗಿ ಬೆಳವಣಿಗೆ ಕಾಣುತ್ತಿರುವುದು ಆಶಾದಾಯಕ ಸಂಗತಿ. ರಂಗಭೂಮಿ ಸಮಾಜದ ಕನ್ನಡಿ ಮಾತ್ರವಲ್ಲ ಸಮಾಜವನ್ನು ಬದಲಾಯಿಸುವ ಶಕ್ತಿಯೂ ಅದಕ್ಕಿದೆ. ಜನರ ಮನಸ್ಸನ್ನು ನೇರವಾಗಿ ತಲುಪುವುದರಿಂದ ಸಾಮಾಜಿಕ ಸುಧಾರಣೆ, ಸಮಾನತೆಯ ನ್ಯಾಯ ಮತ್ತು ಮಾನವೀಯ ಮೌಲ್ಯಗಳ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದೆ. ಯಕ್ಷಗಾನವೂ ಧರ್ಮ, ಸಂಸ್ಕೃತಿ, ಸಾಹಿತ್ಯದ ಹಿನ್ನೆಲೆಯಲ್ಲಿ ರೂಪುಗೊಂಡು ನೈತಿಕ ಸಮಾಜದ ನಿರ್ಮಾಣಕ್ಕೆ ಕಾರಣವಾಗಿದೆ. ಕರ್ನಾಟಕದ ಪ್ರಮುಖ ಸಾಂಪ್ರದಾಯಿಕ ಕಲಾಪ್ರಕಾರವಾದ ಯಕ್ಷಗಾನ ಕನ್ನಡ ರಂಗಭೂಮಿಯ ಬೆಳವಣಿಗೆಯ ಮೇಲೆ ಗಮನಾರ್ಹ ಪ್ರಭಾವ ಬೀರಿದೆ. ಎರಡರಲ್ಲಿಯೂ ನಟನೆ, ಸಂಭಾಷಣೆ, ಸಂಗೀತ, ನೃತ್ಯ, ವೇಷಭೂಷಣ, ಹಾಗೂ ರಂಗಸಜ್ಜಿಕೆ ಪ್ರಮುಖವಾಗಿದೆ. ಯಕ್ಷಗಾನದ ಭಾಗವತಿಕೆ, ಹಾಡು ಮತ್ತು ಸಂಗೀತ ಕನ್ನಡ ರಂಗಭೂಮಿಯ ಸಂಗೀತ ಆಧಾರಿತ ನಾಟಕಗಳಿಗೆ ಪ್ರೇರಣೆಯಾಗಿದೆ. ಅಭಿನಯ ಮತ್ತು ಭಾವ ಪ್ರಕಟಣೆಯ ಶೈಲಿ ನಾಟಕಗಳಲ್ಲಿ ಅಭಿನಯವನ್ನು ಶ್ರೀಮಂತಗೊಳಿಸಿದೆ. ಯಕ್ಷಗಾನದ ವರ್ಣರಂಜಿತ ವೇಷಭೂಷಣ ಕನ್ನಡ ನಾಟಕಗಳ ವೈಭವಕ್ಕೆ ಪ್ರಭಾವ ಬೀರಿದೆ. ರಂಗಭೂಮಿಯು ರಂಗ ಸಜ್ಜಿಕೆ ಯಕ್ಷಗಾನದಲ್ಲಿ ಬಳಸುತ್ತಿರುವುದನ್ನು ಕಾಣುತ್ತೇವೆ. ಆಧುನಿಕ ಕನ್ನಡ ರಂಗಭೂಮಿಯ ಹಲವು ಪ್ರಯೋಗಗಳಲ್ಲೂ ಯಕ್ಷಗಾನದ ನೃತ್ಯ, ಸಂಗೀತ, ಮತ್ತು ರಂಗತಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ. ಎರಡೂ ಪ್ರಕಾರಗಳು ಭಾಷೆ, ಸಾಹಿತ್ಯ, ಮತ್ತು ಸಂಸ್ಕೃತಿಯ ಪ್ರಸಾರಕ್ಕೆ ಮಹತ್ವದ ಕೊಡುಗೆ ನೀಡಿವೆ. ಯಕ್ಷಗಾನ ಕನ್ನಡ ರಂಗಭೂಮಿಗೆ ಕೇವಲ ಒಂದು ಕಲಾಪ್ರಕಾರವಾಗಿ ಉಳಿಯದೆ, ಅದರ ಅಭಿನಯ, ಸಂಗೀತ, ನೃತ್ಯ, ಕಥನ ಮತ್ತು ರಂಗ ಸೌಂದರ್ಯಕ್ಕೆ ಪ್ರಮುಖವಾದ ಅಂಶವಾಗಿದೆ. ಹೀಗೆ ಯಕ್ಷಗಾನದಿಂದ ಕನ್ನಡ ರಂಗಭೂಮಿ, ಕನ್ನಡ ರಂಗಭೂಮಿಯಿಂದ ಯಕ್ಷಗಾನ ಕೊಡು-ಕೊಳ್ಳುವಿಕೆಯ ನೆಲೆಯಿಂದ ಸಂಪನ್ನಗೊಂಡಿರುವುದು ಅವುಗಳ ರಂಗ ಸಾಧ್ಯತೆಗಳನ್ನು ತೋರಿಸಿಕೊಟ್ಟಿವೆ.

**ಪರಾಮರ್ಶನ ಗ್ರಂಥಗಳು:**


1. ಶಿವರಾಮ ಕಾರಂತ, (1974), ಯಕ್ಷಗಾನ, ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
2. ಹರಿದಾಸ ಭಟ್ಟ ಕು. ಶಿ., (1978), ಸಮಗ್ರ ಯಕ್ಷಗಾನ ಪರಂಪರೆ ಮತ್ತು ಪ್ರಯೋಗ, ಉಡುಪಿ: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ.
3. ಬಸವರಾಜ ಜಗಜಂಪಿ ಮತ್ತು ಎಸ್. ಬಿ. ನಾಯಕ, (1986), ಕನ್ನಡ ಸಾಹಿತ್ಯ ಹಾಗೂ ಜೀವನ ಮೌಲ್ಯ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ.
4. ಶತಾವಧಾನಿ ಆರ್. ಗಣೇಶ್, (2008), ಯಕ್ಷರಾತ್ರಿ, ಉಡುಪಿ: ಯಕ್ಷಗಾನ ಕೇಂದ್ರ, ಯಕ್ಷ ಗುರುಕುಲ ಶಿಕ್ಷಣ ಟ್ರಸ್ಟ್.
5. ಉಪೇಂದ್ರ ಸೋಮಯಾಜಿ ಸಿ., (2000), ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಮಂಗಳೂರು: ಮಂಗಳೂರು ವಿಶ್ವವಿದ್ಯಾನಿಲಯ ಅಧ್ಯಾಪಕರ ಸಂಘ.
6. ವೆಂಕಟರಾಮ್ ಎನ್. ಎಸ್., (2001), ರಂಗಭೂಮಿ, ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್.
7. ಭಟ್ ಜಿ. ಎಸ್., (1995), ಯಕ್ಷಗಾನ ಪರಿಶೀಲನ, ಬೆಂಗಳೂರು: ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ.